ಸಾಬಿಯೊಬ್ಬನೊಂದಿಗೆ ಹೊಲಕ್ಕೆ ಬಂದ. ಸಾಬಣ್ಣ ದನದ ಕೊಟ್ಟಿಗೆಯ ಸುತ್ತ ಮೂರು ಸುತ್ತು ಸುತ್ತಿದ. 'ನಿಂಗಪ್ಪಣ್ಣಾ ತಟೂಗ ಕರೀ ಬಣ್ಣದ್ದು ವಸ್ತು ಐತೆನ ನೋಡಣ್ಣ ಇಲ್ಲೆ ಏನರ ಸಿಗತೆನ' ಎಂದ. ನಿಂಗಪ್ಪ ಹಾಗೂ ಮಲ್ಲವ್ವ ದನದ ಕಟಿಗೆ ಸುತ್ತ ಹುಡುಕ ತೊಡಗಿದರು. ಏನೊಂದು ಸಿಗಲಿಲ್ಲ. 'ಅಲ್ಲಾ ಬಾಬಣ್ಣ ನಮಗ ಬೇಕಾಗಿರದು ದನಾ, ಈ ಕರೀ ತುಣಕ್ ತಗಂಡ್ ನಾವೇನ್ ಮಾಡಾನ್ ಹೇಳು' ಎಂದ ನಿಂಗಪ್ಪ. 'ಹಂಗಲ್ಲಣಾ, ನಿಮ್ದು ಮಂದಿಗೆ ಅವೆಲ್ಲಾ ಅರ್ಥಾಗೆ ಆಗಾಕಿಲ್ಲ ಸಿಕ್ಕರೆ ನೋಡ್ ಅಷ್ಟೆ' ಎಂದ. ಬಾಬಣ್ಣನ ಈ ಕೆಲಸ ಆಗದ ಕೆಲಸವೆಂದು ನಿಂಗಪ್ಪ ಕೈಚೆಲ್ಲಿ ಕುಳಿತ. ಮಲ್ಲವ್ವಳಿಗೂ ಇವೆಲ್ಲ ಬುರುಡೆ ಅನ್ನಿಸತೊಡಗಿತು. ನಮ್ಮ ಕಷ್ಟಗಳನ್ನೇ ಇವರೆಲ್ಲ ತಮ್ಮ ಬದುಕನ್ನಾಗಿ ಮಾಡಿಕೊಳ್ಳುತ್ತಿದ್ದಾರೇನೋ ಎಂದೆನ್ನಿಸಿದರೂ, ಇದೊಮ್ಮೆ ನೋಡೋಣ. ಇನ್ನೊಮ್ಮೆ ನೋಡೋಣ ಎಂಬ ಮರೀಚಿಕೆಯ ಓಟ ನಡೆಯುತ್ತಲೇ ಹೋಯಿತು.

ಅಂಬವ್ವನು ತನ್ನ ಪ್ರಯತ್ನ ಮಾಡುತ್ತಿದ್ದಳು. ಈ ಬಾರಿ ಹುಣ್ಣಿಮೆಗೆ ಸರೋಜಮ್ಮಳ ಬಳಿ ಹೋಗಬೇಕೆಂದು ನಿಶ್ಚಯಿಸಿದಳು. ತನ್ನ ಚಿಕ್ಕಮ್ಮ ಸುಮಿತ್ರಾಳಿಗೆ ಇಷ್ಟೆಲ್ಲಾ ಮಾಡಿದರೂ ಯಾವ ಸುಳಿವು ಸಿಗುತ್ತಿಲ್ಲವೆಂದು ಈ ಹುಣ್ಣಿಮೆಗೆ ಬರುತ್ತೇನೆಂದು ಫೋನಾಯಿಸಿ ತಿಳಿಸಿದಳು.

ಮಾತಿನಂತೆ ಅಂಬವ್ವ ಹುಣ್ಣಿಮೆಗೆ ಸರೋಜಮ್ಮಳ ಬಳಿ ಹೋದಳು. ತುಂಬಿದ ಕೊಡಕ್ಕೆ ಹೆಣ್ಣುಮುಖದ ಬೆಳ್ಳಿ ಮೂರ್ತಿಯನ್ನಿಟ್ಟು, ಅದರ ತುಂಬಾ ಹೂಗಳಿಂದ ಅಲಂಕಾರ ಮುಳುಗಿ ಹೋಗಿದ್ದ ಮೂರ್ತಿಗೆ ಪೂಜೆ ಮಾಡಿ ಮಂಗಳಾರತಿ ಆರಂಭಿಸಿದಳು ಸರೋಜಮ್ಮ. ದೇವರಮೂರ್ತಿ ಆದಿಯಾಗಿ ಮನೆಯೊಳಗಿನ ಎಲ್ಲಾ ಫೋಟೊಗಳಿಗೂ ಮಂಗಳಾರತಿ ಮಾಡುತ್ತಾ ಹೊರಗೆ ಹೋಗಿ ಬಂದು, ಒಳಗೆ ಬರುತ್ತಲೇ ಒಮ್ಮೆಲೆ ಚಾರ್ಜ್ ಆದವಳಂತೆ ಮೈಮೇಲೆ ದೇವಿ ಧಾವಿಸಿ ಬಂದಳು. ಸರೋಜಮ್ಮಳ ಮೈಯಲ್ಲಿ ನಿಯಂತ್ರಣ ತಪ್ಪುವುದನ್ನು ಗಮನಿಸಿದ ಅವಳ ಗಂಡ ಕೈಯಲ್ಲಿನ ಮಂಗಳಾರತಿ ತಟ್ಟೆಯನ್ನು ಹಿಡಿದು ಎಲ್ಲರಿಗೂ ಸ್ವೀಕರಿಸಲು ಮುಂದೆ ನಿಂತ ಹೆಂಗಸಿನ ಕೈಗೆ ಕೊಟ್ಟ. ದೇವರು ಬಂದಂತೆ ಕೋಣೆಯೊಳಕ್ಕೆ ಕುಣಿದಾಡುತ್ತಾ ವಿಚಿತ್ರವಾಗಿ ಆಡುತ್ತಿರುವ ಸರೋಜಮ್ಮ, ಬಾಯಿಬಿಟ್ಟು ಏನೊಂದನ್ನೂ ಮಾತನಾಡಲಿಲ್ಲ. ಬದಲಿಗೆ ಸನ್ನೆ ಮಾಡತೊಡಗಿದಳು. ಅಂಬವ್ವ ದೇವಿಯ ಮುಂದೆ ಕೈಮುಗಿದು ನಿಂತಳು. ಸರೋಜಮ್ಮಳ ಆಂಗಿಕ ಸನ್ನೆಯನ್ನು ಅರ್ಥಮಾಡಿಕೊಂಡು ಅವಳ ಗಂಡ ಭಕ್ತರಿಗೆ ಸಂವಹನ ಮಾಡುತ್ತಿದ್ದ. ದೇವಿಯ ಆಂಗಿಕ ಅಭಿನಯದಿಂದ ಗಂಡ ಭಾಷಾಂತರ ಶುರು ಮಾಡಿದ. 'ನೀವು ಮೊದಲೇ ಬೇರೆ ಕಡೆ ಅಲ್ಲೋಗೋ ಬದಲು ನನ್ನ ಬಳಿ ಬಂದಿದ್ದರೆ ಇಷ್ಟೊತ್ತಿಗೆ ದನಾ ನಿಮ್ಮ ಬಳಿ ಇರತಿದ್ವು' ಎಂದು ಮತ್ತೆಮತ್ತೆ ದೇವಿ ಮುಖ ನೋಡಿದ. ಮತ್ತೊಂದು ಸನ್ನೆಯ ಬಳಿಕ 'ಮೂರು ಹುಣ್ಣಿಮೆ ದೇವಿಗೆ ನಡಕಂತ ಬರ್ರಿ ದೇವಿ ನಿಮ್ಮ ದನಾನಾ ಎಲ್ಲೂ ಹೋಗದಂಗ ಕಟ್ಟಿ ಹಾಕಿದಾಳಂತ' ಎಂದು ಮತ್ತೆ ದೇವಿ ಕಡೆಗೆ ಮುಖ ಮಾಡಿದ. ಮತ್ತೊಂದು ಸನ್ನೆಯ ಬಳಿಕ 'ನಿಮ್ಮ ಹೊಲದಾಗ ಚೌಡವ್ವಗ ಕಣ್ಕಟ್ಟು ಮಾಡಸಿ ದನಾ ಹೊಡಕಂಡು ಹೊಗ್ಯಾರ. ಆಕೆಗೆ ಸ್ವಲ್ಪ ಶಾಂತಿ ಮಾಡಸ್ರಿ ಎಲ್ಲಾ ಸರಿ ಆಕತಿ' ಎಂದು ಅಂಬವ್ವಳ ಮಡಿಲಿಗೆ ಹೂವು, ನಿಂಬೆಹಣ್ಣು ಮತ್ತು ಆದಾರದ ಪೊಟ್ಟಣ ಇಟ್ಟು ಕಳಿಸಿದ. ಅಂಬವ್ವ ಅದನ್ನೆ ತಲೆಯೊಳಗಿರಿಸಿಕೊಂಡು ಮುಂದಿನ ಕ್ರಮಗಳನ್ನ ಅನುಸರಿಸಿದಳು.

ಮೂರನೇ ಹುಣ್ಣಿಮೆಯ ಕೊನೆ ಘಳಿಗೆಗೆ ಮತ್ತೆ ಅಂಬವ್ವ ದೈವಿದರ್ಶನದ ವಾಣಿಗೆ ಹೋದಳು. ಈ ಬಾರಿ ದೇವಿ ದನಗಳನ್ನು ಹೊಡಕೊಂಡು ಹೋದವರೇ ತಪ್ಪಾಯಿತೆಂದು, ನಿಮ್ಮ ಮನೆಯ ಬಳಿ ಬಂದು ದನಗಳನ್ನು ಒಪ್ಪಿಸುತ್ತಾರೆಂದು ವಿಶ್ವಾಸದ ಮಾತುಗಳನ್ನಾಡಿತು. ಈ ಮೂರು ತಿಂಗಳಲ್ಲಿ ಅಂಬವ್ವ ಎಷ್ಟರಮಟ್ಟಿಗೆ ಸಮ್ಮೋಹನಕ್ಕೆ ಒಳಗಾಗಿದ್ದಳೆಂದರೆ ಇನ್ನೇನು ದನಗಳು ಸಿಕ್ಕಿಬಿಡುತ್ತವೆಂದು, ಮತ್ತೆ ಹೊಸ ಬಿತ್ತನೆ ಶುರು ಆಗುತ್ತದೆಂದು ಕನಸು ಕಂಡಳು. ಆದರೆ ದೇವಿಯ ಮಾತು ಸುಳ್ಳಾಯಿತು. ಯಾರೂ ಬರಲಿಲ್ಲ, ತಪ್ಪೊಪ್ಪಿಕೊಳ್ಳಲಿಲ್ಲ ಮುಖ್ಯವಾಗಿ ದನಗಳ ಸುಳಿವೂ ಇಲ್ಲ. ಈ ಬಾರಿ ಗಂಡನನ್ನೂ ಜೊತೆಗೆ ಅಂಬವ್ವ ಕರೆದುಕೊಂಡು ಹೋದಳು. ಸರೋಜಮ್ಮ ನಿಂಗಪ್ಪನಿಗೆ 'ಯಾವಾಗರ ಹಾವು ಹೊಡದಿದ್ಯಾ'